
ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಹಾರುವ ಹಾವಿನ ಹುಡುಕಾಟ

ಮನುಷ್ಯ ಪ್ರಪಂಚದ ಆಚೆಗೆ ತಮ್ಮ ಬದುಕಿನ ಗುಟ್ಟುಗಳನ್ನು ಬಿಟ್ಟು ಕೊಡದೆ ತಣ್ಣಗೆ ಬದುಕುತ್ತಿರುವ ಜೀವರಾಶಿಗಳ ಒಳಹೊಕ್ಕು ನೋಡಿದಾಗ ಕಂಡಿದ್ದೆಲ್ಲವೂ ರೋಚಕವೇ.





ಮುಖ್ಯವಾಗಿ ನಿಮಗೆ ಹಾವುಗಳ ಚಿತ್ರ ತೆಗೆಯುವ ನಮ್ಮ ತಲಬಿನ ಬಗ್ಗೆ ಹೇಳಿಕೊಳ್ಳಬೇಕು. ತುಂಬಾ ಜನ ಪಟಗಾರರು ಇದನ್ನು ಇಷ್ಟಪಡುವುದಿಲ್ಲ. ಹಾವಿನ ಸಹವಾಸ ಬೇಡಪ್ಪ ಅಂತ ಮೂಗುಮುರಿಯುತ್ತಾರೆ. ನಮಗೂ ಹೆದರಿಸಿ 'ಎಂಥ ದರಿದ್ರ ದುಶ್ಚಟ ಸಾಕಿಕೊಂಡಿದ್ದೀರಿ? ನಿಮಗೇನು ಹುಚ್ಚು ಹಿಡಿದಿದೆಯಾ?' ಎಂದು ಗುರಾಯಿಸುತ್ತಾರೆ. ಆದರೆ, ಮಳೆಗಾಲ ಶುರುವಾದರೆ ಸಾಕು ತಡಕಾಟ ಶುರುವಾಗೇ ಬಿಡುವುದು. ತೀರ್ಥಹಳ್ಳಿಯ ವಿನಯ ಮತ್ತು ಡಾ. ಪ್ರಭಾಕರ್ ಫೋನು ಮಾಡಿ ಬೇಗ ಬನ್ನಿ ಎಂದು ಆಮಂತ್ರಿಸುತ್ತಾರೆ. ಅವರ ಜೊತೆ ನಮ್ಮ ಶ್ರೀಕಾಂತ್ ಕೂಡಿಕೊಂಡು ಜಿಟಿಜಿಟಿ ಮಳೆಯಲ್ಲಿ ರಾತ್ರಿಯ ಹೊತ್ತು ಹಾವುಗಳ ಹುಡುಕುತ್ತಾ ಹೊರಟೇ ಬಿಡುತ್ತೇವೆ. ಎಷ್ಟೋ ಜನ ನಾವು ಹಾವಾಡಿಗರ ಕುಲದವರೇ ಇರಬಹುದೆಂದೂ, ಇಲ್ಲವೇ ಹಾವಿನ ವಿಷ ಸಂಗ್ರಹಿಸಿ ವಿದೇಶಕ್ಕೆ ಕಳ್ಳಸಾಗಾಟ ಮಾಡುವ ಏಜಂಟರೂ ಆಗಿರಬಹುದೆಂದು ನಂಬಿದ್ದಾರೆ.

ನೆಲದೊಳಗೆ ಹೂತು ಕೂತ ಹಾವುಗಳು ಮಳೆ ಬಿದ್ದಾಗ ಸೆಕೆ ತಾಳಲಾರದೆ ರಸ್ತೆಗೆ ಬರುತ್ತವೆ. ಅಲ್ಲದೆ ಅವುಗಳು ತಮ್ಮ ಆಹಾರ ಹುಡುಕುವ ಹೊತ್ತೂ ಕೂಡ ಇದೇನೆ. ಯಾವ ಹಾವುಗಳು ಯಾವ ಹೊತ್ತಿನಲ್ಲಿ ಓಡಾಡುತ್ತವೆ ಎಂಬ ಟೈಮ್ ಟೇಬಲ್ ವಿನಯನಿಗೆ ಚೆನ್ನಾಗಿ ಗೊತ್ತು. ಚಲಿಸುವ ಕಾರಿನ ಬೆಳಕು ರಸ್ತೆಯ ಮೇಲೆ ಬಿದ್ದರೆ ಅವನು ಹಾವುಗಳ ಚಲನೆಯನ್ನು ಪಕ್ಕಾ ಗುರುತಿಸಬಲ್ಲ. ಈ ಸಮಯದಲ್ಲಿ ರಸ್ತೆಯಲ್ಲಿ ಸಿಕ್ಕು ಸಾಯುವ ಹಾವುಗಳಿಗೆ ಲೆಕ್ಕವೇ ಇರುವುದಿಲ್ಲ. ಹೀಗಾಗಿ ನಾವು ತುಂಬಾ ನಾಜೂಕಾಗಿ ಕಾರು ಓಡಿಸುತ್ತೇವೆ. ಆದರೆ, ಹಳ್ಳಿ ರಸ್ತೆಗಳಲ್ಲಿ ಓಡಾಡುವ ಜನ ಇದಕ್ಕೆಲ್ಲಾ